ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ವಿವರಗಳನ್ನು ಕೇಳಿದ್ದಾರೆ ಉತ್ತರವನ್ನು ತರಿಸಿ ಕೊಡುತ್ತೇನೆ.

೬) ಮೈಸೂರು ಜಿಲ್ಲೆಯ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವುದು

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆಯಲ್ಲಿ ಮೇ, ಜೂನ್ ಜುಲೈ ತಿಂಗಳುಗಳಲ್ಲಿ ಕಬ್ಬು, ಅರಶಿನ, ಹತ್ತಿ, ರಾಗಿ, ಶೇಂಗಾ ಇವ್ನು ಮುಂತಾದ ಬೆಳೆಗಳು ಬಿತ್ತನೆ ಕೆಲಸ ಮತ್ತು ನಾಟಿ ಕೆಲಸ ಪ್ರಾರಂಭ ಮಾಡುವುದರಿಂದ ಈ ಮೂರು ತಿಂಗಳವರೆವಿಗೆ ಬೆಳಿಗ್ಗೆ ೫ ಗಂಟೆಯಿಂದ ಸಾಯಂಕಾಲ ೪ ಗಂಟೆಯವರೆಗೆ ಸತತವಾಗಿ ವಿದ್ಯುತ್ ಪೂರೈಕೆಯಾಗುವಂತೆ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ಮಾನ್ಯ ವಿದ್ಯುಚ್ಛಕ್ತಿ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ರಾಜ್ಯ ವಿದ್ಯುತ್ ಹಾಗೂ ತೋಟಗಾರಿಕೆ ಮಂತ್ರಿಗಳು).—ಈ ಸಧ್ಯದ ನಿರ್ಬಂಧಾನುಸಾರ, ಲೋಡ್ ಶೆಡ್ಡಿಂಗ್ ಅನ್ನು ಬೆಳಿಗ್ಗೆ ೬ ಗಂಟೆಯಿಂದ ಮಧ್ಯಾಹ್ನ ೨ ಗಂಟೆಯವರೆಗೂ ಅಂದರೆ ಒಟ್ಟು ೮ ಗಂಟೆ ಹಗಲು ಹೊತ್ತಿನಲ್ಲಿ ಮಾಡಬೇಕಾಗಿದೆ. ಈ ಅವಧಿಯಲ್ಲಿ ಅನಾನುಕೂಲ ಕಂಡು ಬಂದಲ್ಲಿ ಸ್ಥಳೀಯ ಮಂಡಳಿಯವರಲ್ಲಿ ಸವಾಲೋಚಿಸಿ ಹಗಲು ಹೊತ್ತಿನಲ್ಲಿ ಒಟ್ಟು ೮ ಗಂಟೆ ಲೋಡ್ ಶೆಡ್ಡಿಂಗ್ ಇರುವ ರೀತಿ ಕಾಲಾವಧಿಯನ್ನು ಬದಲಾಯಿಸಿಕೊಳ್ಳಲು ಸ್ಥಳೀಯ ಮಂಡಳಿಯ ಅಧಿಕಾರಿಗಳಿಗೆ ಆದೇಶ ಕೊಡಲಾಗಿದೆ.

(೭) ಪೋಲೀಸ್ ಪೇದೆಗಳಿಗೆ ಆಹಾರ ಧಾನ್ಯಗಳನ್ನು ಸಬ್ಸಿಡಿ ರೂಪದಲ್ಲಿ ವಿತರಿಸಲು ಪ್ರಕಟಿಸಿ ನಂತರ ಕೊಡದಿರುವುದು

ಶ್ರೀ ಆರ್. ವೆಂಕಟರಾಮಯ್ಯ.—ಕರ್ನಾಟಕದ ಆಯವ್ಯಯದಲ್ಲಿ, ಪೋಲೀಸ್ ಪೇದೆ, ಮುಖ್ಯ ಪೇದೆ, ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್‌ಗಳು ಮತ್ತಿತರರಿಗೆ ಆಹಾರ ಧಾನ್ಯಗಳನ್ನು ಸಬ್ಸಿಡಿ ರೇಟಿನಲ್ಲಿ ೧–೪–೬೮ರಿಂದ ವಿತರಿಸಲು ಒಪ್ಪಿರುವುದಾಗಿ ಪ್ರಕಟಿದ್ದರು. ಪೋಲೀಸ್ ಇಲಾಖೆಯ ಅಧಿಕಾರಿಗಳು ಆಸೆಯಿಂದ ಕಾದಿದ್ದು ಈಗ ಆಸೆ ನಿರಾಸೆಯಾಗಿದೆ. ಸರ್ಕಾರ ತನ್ನ ಆಶ್ವಾಸನೆಯನ್ನು ಈಡೇರಿಸಲಿಲ್ಲವೆಂದು ಸಂಕಟ ಪಡುತ್ತಿರುವ ಮಟ್ಟಕ್ಕೆ ಇಳಿದಿರುವ ದೂರುಗಳು ಸಾರ್ವಜನಿಕರಿಂದ ಬಂದಿವೆ. ಆದುದರಿಂದ ಈ ಬಂದುನಿರ್ದಿಷ್ಟ ಆಶ್ವಾಸನೆಯನ್ನು ತಕ್ಷಣ ಈಡೇರಿಸಿ ಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ನಿರಾಶರಾಗಬೇಕಾಗಿಲ್ಲ, ಉತ್ತರ ಕೊಡುತ್ತೇನೆ.

ರಾಜ್ಯದ ಪೋಲೀಸ್ ಇಲಾಖೆಯ ಸುಧಾರಣೆಗಳ ಬಗ್ಗೆ ರಾಷ್ಟ್ರೀಯ ಪೋಲೀಸ್ ಆಯೋಗವು ಹಲವು ಶಿಫಾರಸ್ಸುಗಳನ್ನು ಮಾಡಿದೆ. ಈ ಆಯೋಗವು ಪಶ್ಚಿಮ ಬಂಗಾಳದಲ್ಲಿ ಪೋಲೀಸ್ ಸಿಬ್ಬಂದಿಗೆ ರಿಯಾಯಿತಿ ದರದಲ್ಲಿ ಆಹಾರ ಧಾನ್ಯ ಸರಬರಾಜು ಮಾಡುವ ಪದ್ಧತಿಯನ್ನು ಇಲ್ಲಿಯೂ ಸಹ ಅನುಷ್ಠಾನಕ್ಕೆ ತರಲು ಶಿಫಾರಸ್ಸು ಮಾಡಿದೆ....

ರಿಯಾಯಿತಿ ದರದಲ್ಲಿ ಪೋಲೀಸ್ ಕಾನ್‌ಸ್ಟೇಬಲ್ಲುಗಳಿಗೆ ಅತ್ಯಾವಶ್ಯಕ ದಿನಸಿಗಳ ಸರಬರಾಜು ಮಾಡುವುದನ್ನು ಬಜೆಟ್ ಭಾಷಣದಲ್ಲಿ ಪ್ರಸ್ತಾಪಿಸಿದಂತೆ ವಿವರವಾದ ಪ್ರಸ್ತಾವವನ್ನು ಈಗಾಗಲೇ ಇಲಾಖೆಯನ್ನು ಕೇಳಲಾಗಿದ್ದು, ಅದು ಬಂದ ನಂತರ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.